IJHA
Indian Journal of History and Archaeology

# Indian Journal of History and Archaeology

ISSN (E):2582-225X
VOL-2, ISSUE -4,NOVEMBER-DECEMBER, 2020, 90-98

# ಕವಲೇದುರ್ಗದ ಕೋಟೆಯ ನೀರಾವರಿ ವ್ಯವಸ್ಥೆ

**ಮಲ್ಲೇಶ ಎಂ**

**ಮಲ್ಲೇಶ ಎಂ**
ಪಿಎಚ್.ಡಿ. ಸಂಶೋಧನಾರ್ಥಿ
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

**ಪೀಠಿಕೆ**

ಪ್ರಕೃತಿಯ ಮಡಿಲು ನಿಸರ್ಗದ ಸ್ವರ್ಗವಾದಂತಹ ಶಿವಮೊಗ್ಗ ಜಿಲ್ಲೆಯು ಕರ್ನಾಟಕದ ಅತ್ಯಂತ ಪ್ರಮುಖವಾದಂತಹ ಮಲೆನಾಡಿನ ಪ್ರವಾಸಿ ತಾಣವಾಗಿದೆ. ಈ ಜಿಲ್ಲೆಯಲ್ಲಿ ಅನೇಕ ಐತಿಹಾಸಿಕ ಕೋಟೆಗಳು, ಐತಿಹಾಸಿಕ ತಾಣಗಳು ಕಂಡುಬರುತ್ತವೆ. ಈ ಐತಿಹಾಸಿಕ ತಾಣಗಳಲ್ಲಿ ಶಿವಮೊಗ್ಗ ಜಿಲ್ಲೆಯ ಕವಲೇದುರ್ಗವು ಸಹ ಒಂದಾಗಿರುತ್ತದೆ. ಈ ಕವಲೇದುರ್ಗ ಕೋಟೆಯು ಶಿವಮೊಗ್ಗ ನಗರದಿಂದ ಸುಮಾರು ೮೦ ಕಿ.ಮೀ. ದೂರದಲ್ಲಿದೆ. ಇದು ಶಿವಮೊಗ್ಗ ಜಿಲ್ಲೆಯ ಪ್ರಮುಖ ತಾಲ್ಲೂಕು ಕೇಂದ್ರವಾದ ತೀರ್ಥಹಳ್ಳಿಗೆ ಸೇರಿದ್ದಾಗಿದೆ. ತೀರ್ಥಹಳ್ಳಿಯಿಂದ ೧೮ ಕಿ.ಮೀ. ಪಶ್ಚಿಮ ದಿಕ್ಕಿನಲ್ಲಿ ತೀರ್ಥಹಳ್ಳಿ–ಸಾಲೂರು ಮಾರ್ಗವಾಗಿ ಸಾಗಿದರೆ ದಟ್ಟ ಕಾಡುಗಳಿಂದ ಕೂಡಿದ ಸಹ್ಯಾದ್ರಿ ಶ್ರೇಣಿಯ ಮಡಿಲಲ್ಲಿ ಕವಲೇದುರ್ಗವು ಎದುರಾಗುತ್ತದೆ. ಇದು ಸಮುದ್ರ ಮಟ್ಟದಿಂದ ಸುಮಾರು ೩೦೫೦ ಅಡಿ ಎತ್ತರದಲ್ಲಿದೆ. ಕವಲೇದುರ್ಗ ಕೋಟೆಯು ಕೆಳದಿ ಅರಸರ ಆಳ್ವಿಕೆಯ ನಾಲ್ಕನೇ ರಾಜಧಾನಿಯಾಗಿತ್ತು. ಕೆಳದಿ ಅರಸರ ಆಡಳಿತದ ನಾಲ್ಕು ರಾಜಧಾನಿಗಳಲ್ಲಿ ಅತ್ಯಂತ ದುರ್ಗಮವಾದ ಸ್ಥಳ ಇದಾಗಿದೆ. ಈ ಕೋಟೆಯ ಸುತ್ತ ಅತ್ಯಂತ ದಟ್ಟವಾದ ಅರಣ್ಯ ಮತ್ತು ಗುಡ್ಡಗಾಡುಗಳಿರುವುದನ್ನು ಕಾಣಬಹುದು. ಹೇಗೆಂದರೆ ನಾವು ಕೋಟೆಯ ಕೆಳಗಿನಿಂದ ಮತ್ತು ದೂರದಿಂದ ನೋಡಿದರೂ ಸಹ ಇಲ್ಲಿ ಒಂದು ಕೋಟೆಯಿದೆ ಎಂದು ಹೇಳಲು ಸಾಧ್ಯವಿಲ್ಲದಷ್ಟು ಹಚ್ಚಹಸುರಿನ ಹೊದಿಕೆಯಿಂದ ದಟ್ಟವಾಗಿದೆ. ಈ ಸ್ಥಳಕ್ಕೆ ಕವಿಲೆದುರ್ಗ, ಕವಲೇದುರ್ಗ, ಕೌಲೆದುರ್ಗ ಮುಮತಾದ ಹೆಸರುಗಳಿಂದ ಕರೆಯುತ್ತಾರೆ. ಕೆಳದಿ ಅರಸರ ಶಾಸನಗಳಲ್ಲಿ ಇದನ್ನು ಭುವನಗಿರಿದುರ್ಗ ಎಂದು ಕರೆಯಲಾಗಿದೆ.

ಕವಲೇದುರ್ಗವು ಸುಮಾರು ಕ್ರಿ.ಶ. 1822ರವರೆಗೂ ತಾಲ್ಲೂಕು ಕೇಂದ್ರವಾಗಿತ್ತು. ನಂತರ ತೀರ್ಥಹಳ್ಳಿಗೆ ಎಲ್ಲಾ ಆಡಳಿತ ಕಚೇರಿಗಳು ವರ್ಗಾಯಿಸಲ್ಪಟ್ಟು ತೀರ್ಥಹಳ್ಳಿ ತಾಲ್ಲೂಕು ಎಂದು ಬದಲಾಯಿತು. ಕವಲೇದುರ್ಗದ ದುರ್ಗಮವಾದ ಬೆಟ್ಟದಲ್ಲಿ ಕೆಳದಿ ಅರಸರ ಅತ್ಯದ್ಭುತವಾದ ಕೋಟೆಯಿದೆ.

ಭವ್ಯವಾದ ಬಾಗಿಲು, ಮೆಟ್ಟಿಲು, ದೇವಾಲಯಗಳು ಮತ್ತು ಕೊಳಗಳಿಂದ ಕೂಡಿದ ಈ ಕೋಟೆ ನೋಡಲು ಬಹಳ ಸುಂದರವಾಗಿದೆ. ಇದು ಚಿತ್ರದುರ್ಗ ಕೋಟೆಯಂತೆಯೇ ಏಳುಸುತ್ತಿನ ಕೋಟೆಯಾಗಿದ್ದು ಅಷ್ಟೇ ಭದ್ರವಾಗಿದೆ. ಈ ಕೋಟೆಯನ್ನು ಕೆಳದಿಯ ಪ್ರಮುಖ ಅರಸನಾದ ಸದಾಶಿವನಾಯಕ (1540–1565) ಕಟ್ಟಿಸಿದನೆಂದು ತಿಳಿದುಬಂದಿದೆ. ಸದಾಶಿವನಾಯಕನ ನ಼ಂತರದ ಅರಸರು ಆಗಾಗ ಈ ಕೋಟೆಯನ್ನು ಭದ್ರಪಡಿಸುತ್ತಲೇ ಇದ್ದರು. ಎರಡನೇ ಸೋಮಶೇಖರ ನಾಯಕನು (1714–1719) ಈ ಕೋಟೆಯನ್ನು ಜೀರ್ಣೋದ್ಧಾರ ಮಾಡಿದುದಲ್ಲದೇ ಗಾಳಿಯುಪ್ಪರಿಗೆಯನ್ನು ಕಟ್ಟಿಸಿದನು. ಕೋಟೆಯಿಂದ ಹೊರಗೆ ಹೋಗಲು ಚಪ್ಪೆಬಾಗಿಲು, ಕೌರಿಬಾಗಿಲು, ಭದ್ರಾಸುರದ ಬಾಗಿಲು, ದಿಡ್ಡಿ (ಗಿಡ್ಡಿ) ಬಾಗಿಲುಗಳೆಂಬ ಹಲವು ಬಾಗಿಲುಗಳಿವೆ. ಈ ಕೋಟೆಯನ್ನು ಕುರಿತು ಅಮಿರ್ ಖುಸ್ರೋ ಎಂಬ ಸೂಫಿ ಕವಿ ಶ್ರೀ ಶಾರದೆಯ ಮೂಲಪೀಠವಿರುವ ಕಾಶ್ಮೀರದ ಪರಿಸರ ಮತತ್ತು ಸೌಂದರ್ಯಕ್ಕೆ ಮನಸೋತು ಈ ಕೆಳಕಂಡ ಸಾಲುಗಳನ್ನು ಹೇಳುತ್ತಾನೆ.

Agar Firdas bar ru-ye zamin ast Hamin ast-o- hamin ast-o hamin ast (if there is heaven on earth, it is this, it is this, it is this)

ಇದರ ಅರ್ಥ "ಈ ಭೂಮಿಯ ಮೇಲೆ ಸ್ವರ್ಗ ಎನ್ನುವುದು ಇದ್ದರೆ ಅದು ಇರುವುದು ಇಲ್ಲೆ, ಇಲ್ಲೆ ಇಲ್ಲೆ".

ಬಹುಶಃ ಅಮೀರ್ ಖುಸ್ರೋ ನಮ್ಮ ಮಲೆನಾಡಿನ ಭುವನಗಿರಿ ಕೋಟೆಯ (ಕವಲೇದುರ್ಗ ಕೋಟೆ) ಪರಿಸರವನ್ನು ಒಮ್ಮೆ ನೋಡಿದ್ದರೆ ಇಂತಹುದೇ ಸುಂದರವಾದ ಸಾಲುಗಳಿಂದ ಮಲೆನಾಡಿನ ಈ ಅದ್ಭುತ ತಾಣವನ್ನು ವರ್ಣಿಸುತ್ತಿದ್ದನೇನೊ. ಈ ಕೋಟೆಯ ಹಾಗೂ ಊರಿನ ಒಳಗೆ ಕೆಳದಿ ಅರಸರ ವೆಂಕಟಪ್ಪನಾಯಕನಿಂದ ಪ್ರತಿಷ್ಟಿತವಾದ ಮೈಲಾರೇಶ್ವರ, ವೀರಭದ್ರ, ವಿರೂಪಾಕ್ಷ, ವಿನಾಯಕ ಶಿಖರೇಶ್ವರ, ಲಕ್ಷ್ಮಿನಾರಾಯಣ ಮುಂತಾದ ದೇವ–ದೇವತೆಗಳ ಗುಡಿಗಳಿವೆ. ಇವುಗಳಲ್ಲದೆ ಅನೇಕ ಪಾಳು ಬಿದ್ದಿರುವ ಗುಡಿಗಳು, ಟಂಕಸಾಲೆ, ಕಲ್ಯಾಣಮಂಟಪಗಳು, ಪುರಾತನ ಗೋರಿಗಳು, ಜಲಕ್ರೀಡಾ ಕೊಳಗಳು, ಕೆರೆಗಳು, ದುರ್ಗದ ತಿಮ್ಮಣ್ಣನೆಂಬುವನು ಕಟ್ಟಿಸಿಕೊಟ್ಟ ಮಹಾಮಹತ್ತಿನ ಮಠ ಎಂದು ಕರೆಯುವ ವೀರಶೈವ ಮಠ ಹಾಗೂ ಗವಿಮಠವೆಂದು ಕರೆಯುವ ಪಾಳು ಬಿದ್ದಿರುವ ಮಠಗಳು, ಮಾಸ್ತಿಕಲ್ಲುಗಳು, ಎಣ್ಣೆ–ತುಪ್ಪದ

ಬಾವಿಗಳು, ಅರಮನೆಯ ಅವಶೇಷಗಳು, ಕಲ್ಯಾಣಿಗಳು, ಮದ್ದುಗುಂಡುಗಳನ್ನು ಶೇಖರಿಸಿಡುತ್ತಿದ್ದ ಕೋಟೆಗಳು, ಕಾಲುವೆಯ ಅವಶೇಷಗಳು ಮುಂತಾದವುಗಳನ್ನು ಇಂದಿಗೂ ಸಹ ನೋಡಬಹುದಾಗಿದೆ.

ಕವಲೇದುರ್ಗ ಕೋಟೆಯಲ್ಲಿ ಪ್ರಮುಖವಾಗಿ ಒಟ್ಟು ಐದು ಕೆರೆಗಳನ್ನು ಹಾಗೂ ನಾಲ್ಕು ಕೊಳಗಳನ್ನು ನೋಡಬಹುದಾಗಿದೆ. ಕೆಳದಿ ಅರಸರ ಕಾಲದ ನೀರಾವರಿ ವ್ಯವಸ್ಥೆಯು ಪ್ರಮುಖವಾಗಿ ಮಳೆ ಮತ್ತು ನದಿ–ಕೆರೆಗಳನ್ನು ಆಶ್ರಯಿಸಿದೆ. ಕವಲೇದುರ್ಗ ಕೋಟೆಯಲ್ಲಿರುವ ಪ್ರತಿಯೊಂದು ಕೆರೆ ಮತ್ತು ಕೊಳಗಳಿಗೆ ಮಳೆಯ ನೀರು ಕೋಟೆಯ ಮೇಲಿನಿಂದ ಕಾಲುವೆ ಮುಖಾಂತರ ಹರಿದು ಬಂದು ಕೆರೆಗಳಿಗೆ ಸೇರುವ ವ್ಯವಸ್ಥೆಯನ್ನು ಮಾಡಲಾಗಿದೆ. ಪ್ರತಿಯೊಂದು ಕೆರೆ ಮತ್ತು ಕೊಳಗಳಿಂದ ನೀರು ಪ್ರತಿ ಕೋಟೆಯ ದ್ವಾರದ ಹತ್ತಿರ ಇರುವ ಮೂರು ಅಡಿ ಅಗಲದ ಕಾಲುವೆ ಮುಖಾಂತರ ಹರಿಯುವಂತೆ ಸರಪಳಿ ರೂಪದ ವ್ಯವಸ್ಥೆ ಮಾಡಿರುವುದನ್ನು ಕಾಣಬಹುದು. ಕವಲೇದುರ್ಗದ ಕೋಟೆಯಲ್ಲಿ ಇರುವ ಪ್ರಮುಖವಾದ ಕೊಳ ಮತ್ತು ಕೆರೆಗಳನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

1. **ಭೀಮನ ಕೊಳ**

| | | | | | |
|---|---|---|---|---|---|
| ಊರು | : | ಕವಲೇದುರ್ಗ | ಸ್ಥಿತಿ | : | ಮಧ್ಯಮ |
| ದಿಕ್ಕು | : | ಕೋಟೆಯ ಶಿಖರೇಶ್ವರ ದೇವಾಲಯದ ಉತ್ತರ | ಸಂರಕ್ಷಣೆ | : | ಇಲ್ಲ |
| ಕಾಲ | : | 16–17ನೇ ಶತಮಾನ | ವಿಸ್ತೀರ್ಣ | : | 30 ಅಡಿ ಉದ್ದ ಹಾಗೂ 3 ಅಡಿ ಅಗಲ |
| ಸ್ಥಳ | : | ಕೋಟೆಯ ತುದಿಯ ಶಿಖರೇಶ್ವರ ದೇವಾಲಯದ ಪಕ್ಕ | ಉಪಯೋಗ | : | ಕುಡಿಯಲು |

ಈ ಭೀಮನ ಕೊಳವು ಸ್ವಾಭಾವಿಕ ನೀರಿನ ಬುಗ್ಗೆಯಾಗಿದ್ದು ಬಂಡೆಯ ಮಧ್ಯೆ ಇದೆ. ಇಲ್ಲಿನ ನೀರು ಯಾವತ್ತೂ ಬತ್ತುವುದಿಲ್ಲ. ಇಲ್ಲಿಗೆ ನೀರು ಎಲ್ಲಿಂದ ಸಂಗ್ರಹವಾಗುತ್ತದೆ ಎನ್ನುವುದು ಯಾರಿಗೂ ತಿಳಿದು ಬಂದಿಲ್ಲ. ಮಳೆಗಾಲದಲ್ಲಿ ಮಳೆಯಿಂದ ಸಂಗ್ರಹವಾದರೆ ಬೇಸಿಗೆಯಲ್ಲಿ ನೀರಿರುವುದು ಇದರ ವಿಶೇಷವಾಗಿದೆ. ಇದು ಸಮುದ್ರಮಟ್ಟದಿಂದ 3050 ಅಡಿ ಎತ್ತರವಿದ್ದು ಇಷ್ಟು ಎತ್ತರದಲ್ಲಿ ನೀರು ಸ್ವಾಭಾವಿಕವಾಗಿ

ಸಂಗ್ರಹವಾಗುವುದು ಇದರ ವಿಶೇಷತೆಯಾಗಿದೆ. ಇದನ್ನು ಗದಾತೀರ್ಥ ಎಂತಲೂ ಸಹ ಕರೆಯಲಾಗುತ್ತದೆ. ಇದರ ದ್ವಾರ 3 ಅಡಿ ಅಗಲ ಮತ್ತು 5 ಅಡಿ ಎತ್ತರವಾಗಿದೆ. ಅದರ ಒಳಗೆ ನೀರು ಸುಮಾರು 5 ಅಡಿ ಅಗಲ 30 ಅಡಿ ಉದ್ದದ ಅಳತೆಯಲ್ಲಿ ಸಂಗ್ರಹವಾಗಿದೆ. ಇದರ ನೀರನ್ನು ಸೈನಿಕರು, ಕೋಟೆಯ ಕಾವಲುಗಾರರು ಕುಡಿಯಲು ಹಾಗೂ ಶಿಖರೇಶ್ವರ ದೇವಾಲಯದ ಪೂಜಾ ವಿಧಿ–ವಿಧಾನಗಳಗೆ ಬಳಸಲಾಗುತ್ತಿತ್ತು.

**2. ಶಾಂತಗಂಗೆ ಕೊಳ**

| | | | | | |
|---|---|---|---|---|---|
| ಊರು | : | ಕವಲೇದುರ್ಗ | ಸ್ಥಿತಿ | : | ಮಧ್ಯಮ |
| ದಿಕ್ಕು | : | ಅರಮನೆಗೆ ದಕ್ಷಿಣ | ಸಂರಕ್ಷಣೆ | : | ಇದೆ |
| ಕಾಲ | : | 16–17ನೇ ಶತಮಾನ | ವಿಸ್ತೀರ್ಣ ಕೊಳ | : | 40 ಅಡಿ ಉದ್ದ, 20 ಅಡಿ ಅಗಲ |
| ಸ್ಥಳ | : | ಕೋಟೆಯ ಅರಮನೆ ಕಟ್ಟಡದ ಹಿಂಭಾಗ | ಉಪಯೋಗ | : | ಈಜುಕೊಳ |

ಶಾಂತಗಂಗೆ ಕೊಳವು ನೋಡಲು ಅದ್ಭುತವಾಗಿದ್ದು ನಗರದ ದೇವಗಂಗೆ ಕೊಳದಂತೆ ನಿರ್ಮಿಸಲಾಗಿದೆ. ಆದರೆ ಅದರ ವಿಸ್ತೀರ್ಣಕ್ಕಿಂತ ಕಡಿಮೆ ಇದೆ. ಇದು ಕೋಟೆಯ ಅರಮನೆ ಕಟ್ಟಡದ ಹಿಂಭಾಗದಲ್ಲಿದೆ. ಇದು ರಾಣಿಯರ ಈಜು ಕೊಳವಾಗಿದೆ. ಈ ಕೊಳಕ್ಕೆ ನೀರು ಅಂತರ್ಗತವಾಗಿ ಬಂದು ಸಂಗ್ರಹವಾಗುತ್ತದೆ. ಇದರ ಆವರಣದ ಗೋಡೆಯ ಮೇಲೆ ಬಲಗಡೆ ಒಂದು ಚೌಕಾಕಾರದ ಸಣ್ಣ ಭಾವಿಯ ರೂಪದಲ್ಲಿರುವ ಸ್ಥಳದಿಂದ ಇದಕ್ಕೆ ನೀರು ಅಂತರ್ಗತವಾಗಿ ಬರುತ್ತದೆ. ಇದಕ್ಕೆ ಇಳಯಲು ಮೆಟ್ಟಿಲುಗಳವೆ. ಈ ನೀರು ಮೇಲಿನ ಶಿಖರೇಶ್ವರ ದೇವಾಲಯದ ಕೆಳಗೆ ಒಂದು ಹಾಳಾದ ದೇವಾಲಯವಿದ್ದು ಅಲ್ಲಿ ಉಕ್ಕುತ್ತಿದ್ದ ಸ್ವಾಭಾವಿಕ ಬುಗ್ಗೆಯಿಂದ ತಾಮ್ರದ ಕೊಳವೆಯ ಮೂಲಕ ನೀರನ್ನು ಈ ಕೊಳಕ್ಕೆ ಹರಿಸಲಾಗುತ್ತಿತ್ತು. ಇದನ್ನು ಕಲ್ಲುಗಳಂದ ನಿರ್ಮಿಸಲಾಗಿದೆ.

**3. ಎರಡನೇ ಕೋಟೆದ್ವಾರದ ಮುಂದೆ ಎಡಕ್ಕೆ ಕೆಳಭಾಗದಲ್ಲಿ ಇರುವ ಕೊಳ**

| | | | | | |
|---|---|---|---|---|---|
| ಊರು | : | ಕವಲೇದುರ್ಗ | ಸ್ಥಿತಿ | : | ಶಿಥಿಲಾವಸ್ಥೆ |
| ದಿಕ್ಕು | : | ಅರಮನೆಯ ಉತ್ತರ | ಸಂರಕ್ಷಣೆ | : | ಇಲ್ಲ |

| | | | | | |
|---|---|---|---|---|---|
| ಕಾಲ | : | 16–17ನೇ ಶತಮಾನ | ವಿಸ್ತೀರ್ಣ | : | 40 ಅಡಿ ಉದ್ದ<br>20 ಅಡಿ ಅಗಲ |
| ಸ್ಥಳ | : | ಎರಡನೇ ಕೋಟೆದ್ವಾರದ ಮುಂದೆ ಎಡಕ್ಕೆ | ಉಪಯೋಗ | : | ಕುಡಿಯಲು |

ಕವಲೇದುರ್ಗದ ಕೋಟೆಗೆ ಹೋಗುವಾಗ ಸಿಗುವ ಎರಡನೇ ಕೋಟೆ ದ್ವಾರದ ಮುಂದೆ ಎಡಗಡೆ ಕೆಳಭಾಗದಲ್ಲಿ ಇರುವ ಈ ಕೊಳವು ಕುಡಿಯುವ ನೀರಿನ ಕೊಳವಾಗಿದೆ. ಇದನ್ನು ಸಹ ಶಾಂತಗಂಗೆ ಕೊಳದ ಮಾದರಿಯಲ್ಲೇ ನಿರ್ಮಿಸಲಾಗಿದೆ. ಈ ಕೊಳಕ್ಕೆ ಇಳಿಯಲು ಮೆಟ್ಟಿಲುಗಳಿವೆ. ಈ ಕೊಳಕ್ಕೆ ನೀರು ಮಳೆ ಮತ್ತು ಬೆಟ್ಟದಿಂದ ಹರಿದು ಬರುವ ಕೋಟೆಯ ದ್ವಾರದ ಹತ್ತಿರದಲ್ಲಿ ಇರುವ ಮೂರು ಅಡಿ ಅಗಲದ ಸಣ್ಣ ಕಿಂಡಿಯ ಮುಖಾಂತರ ಇಲ್ಲಿಗೆ ಬಂದು ಸೇರುತ್ತದೆ. ಆದರೆ ಈ ಕೊಳದ ನೀರು ಅಲ್ಲಿಂದ ಮುಂದೆ ಅಂತರ್ಗತವಾಗಿ ಹರಿದು ಶಿವಪ್ಪನಾಯಕನ ಕೆರೆಯನ್ನು ಸೇರುತ್ತದೆ.

**4. ಅರಮನೆ ಬಾವಿ ಮತ್ತು ಸ್ನಾನದ ಗೃಹ**

ಅರಮನೆಯ ಬಾವಿಯು ಅರಮನೆ ಮುಂಭಾಗದಲ್ಲಿದ್ದು ವಿಸ್ತೀರ್ಣ 12 ಅಡಿ ಅಗಲ ಮತ್ತು 10 ಅಡಿ ಉದ್ದವಾಗಿದೆ. ಈ ಬಾವಿಯ ನೀರನ್ನು ಅರಮನೆಯ ದಿನನಿತ್ಯದ ಉಪಯೋಗಗಳಿಗೆ ಉಪಯೋಗಿಸಲಾಗುತ್ತಿತ್ತು.

ಅರಮನೆಯ ಸ್ನಾನದ ಗೃಹಕ್ಕೆ ಮೇಲಿನಿಂದ ಬರುವ ನೀರನ್ನು ತಾಮ್ರ ಮತ್ತು ಕಲ್ಲಿನ ಕೊಳವೆಗಳ ಮೂಲಕ ಹರಿಸಿ ಅಲ್ಲಿ ಎರಡು ಕಲ್ಲಿನ ತೊಟ್ಟಿಗಳಿಗೆ ಬೀಳುವಂತೆ ಅಂತರ್ಗತವಾಗಿ ಬರುವಂತೆ ವ್ಯವಸ್ಥೆ ಮಾಡಿರುವುದು ವಿಶೇಷವಾಗಿದೆ.

**5. ಶಿವಪ್ಪನಾಯಕನ ಕೆರೆ ಅಥವಾ ಮಠದ ಕೆರೆ**

| | | | | | |
|---|---|---|---|---|---|
| ಊರು | : | ಕವಲೇದುರ್ಗ | ಸ್ಥಿತಿ | : | ಶಿಥಿಲಾವಸ್ಥೆ |
| ದಿಕ್ಕು | : | ಕೋಟೆಯಿಂದ ಪಶ್ಚಿಮ | ಸಂರಕ್ಷಣೆ | : | ಇಲ್ಲ |
| ಕಾಲ | : | 16–17ನೇ ಶತಮಾನ | ವಿಸ್ತೀರ್ಣ | : | 7 ಎಕರೆ |
| ಸ್ಥಳ | : | ಕೋಟೆಯ ಕೆಳಗೆ | ತೂಬು | : | ಹಾಳಾಗಿದೆ |
| ಅಚ್ಚುಕಟ್ಟು | : | 40 ಎಕರೆ | ಉಪಯೋಗ | : | ಕೃಷಿಗೆ ಮತ್ತು ಮಠಕ್ಕೆ |

ಪ್ರದೇಶ

ಶಿವಪ್ಪನಾಯಕನ ಕೆರೆಯು ತೀರ್ಥಹಳ್ಳಿಯಿಂದ ನಗರ ಮಾರ್ಗವಾಗಿ 15 ಕಿಲೋಮೀಟರ್ ಸಾಗಿ ಅಲ್ಲಿಂದ ಎಡಕ್ಕೆ 3 ಕಿಲೋಮೀಟರ್ ಸಾಗಿದರೆ ಕವಲೇದುರ್ಗ ಕೋಟೆ ಸಿಗುತ್ತದೆ. ಈ ಕೋಟೆಯ ಕೆಳಗೆ ಇರುವುದೇ ಶಿವಪ್ಪನಾಯಕನ ಕೆರೆ. ಈ ಕೆರೆಯು ಶಿವಪ್ಪನಾಯಕನ ಆಳ್ವಿಕೆಯಲ್ಲಿ ನಿರ್ಮಿತವಾಗಿದೆ. ಇದಕ್ಕೆ ನೀರು ಸುತ್ತಮುತ್ತಲಿನ ಬೆಟ್ಟ ಮತ್ತು ಬೆಟ್ಟದಲ್ಲಿರುವ ಕೋಟೆಯ ಮುಖಾಂತರ ನೀರು ಸಂಗ್ರಹವಾಗುತ್ತದೆ. ಪ್ರತಿ ಕೋಟೆಯ ದ್ವಾರಬಾಗಿಲಿನ ಹತ್ತಿರ 3 ಅಡಿ ಅಗಲದಲ್ಲಿ ಕಾಲುವೆ ರೂಪದಲ್ಲಿ ಮೇಲಿನಿಂದ ನೀರನ್ನು ಹರಿಸಲಾಗಿದೆ. ಇದರ ಮೂಲ ಮಳೆಯ ನೀರೇ ಆಗಿದೆ. ಈ ಕೆರೆಯಲ್ಲಿ ಹಳೆಯ ತೂಬು ಹಾಳಾಗಿದ್ದು ಹೊಸ ತೂಬು ನಿರ್ಮಿಸಲಾಗಿದೆ. ಅಲ್ಲಿಂದ ಭೂಮಿಯ ಒಳಗೆ ಕೊಳವೆಯ ಮಾರ್ಗವಾಗಿ ನೀರನ್ನು ಹೊರಗೆ ಹರಿಸಲಾಗುತ್ತದೆ. ಕೆರೆಯಿಂದ ಹೊರಗೆ ಬರುವ ನೀರಿಗೆ 6 ಅಡಿ ಅಗಲದ ಕಾಲುವೆ ನಿರ್ಮಿಸಲಾಗಿದೆ. ಈ ಕಾಲುವೆಯ ನೀರನ್ನು ಎರಡು ಕವಲುಗಳಾಗಿ ಹೊಡೆದು ಒಂದನ್ನು ಮಠಕ್ಕೆ ಇನ್ನೊಂದನ್ನು ಕೃಷಿಗೆ ಉಪಯೋಗಿಸಲಾಗಿದೆ. ಮಠಕ್ಕೆ ಹೋಗುವ ಕಾಲುವೆಯು ಅಂತರ್ಗತವಾಗಿ ಕೊಳವೆ ಮೂಲಕ ಹರಿದು ಮಠದ ಮುಂದೆ ಇರುವ ಚಿಕ್ಕ ಬಾವಿಗೆ ಬಂದು ಮಠಕ್ಕೆ ಉಪಯೋಗವಾಗುತ್ತದೆ. ಈ ಕೆರೆಯ ನೀರು ಮುಂದೆ ಸಾಗಿ ತಿಮ್ಮಣ್ಣ ನಾಯಕನ ಕೆರೆಗೆ ಸೇರುತ್ತದೆ.

**6. ತಿಮ್ಮಣ್ಣನಾಯಕನ ಕೆರೆ**

| | | | | | |
|---|---|---|---|---|---|
| ಊರು | : | ಕವಲೇದುರ್ಗ | ಸ್ಥಿತಿ | : | ಶಿಥಿಲಾವಸ್ಥೆ |
| ದಿಕ್ಕು | : | ಕೋಟೆಯಿಂದ ಪೂರ್ವ | ಸಂರಕ್ಷಣೆ | : | ಇಲ್ಲ |
| ಕಾಲ | : | 16–17ನೇ ಶತಮಾನ | ವಿಸ್ತೀರ್ಣ | : | 15 ಎಕರೆ |
| ಸ್ಥಳ | : | ಊರಿನ ದ್ವಾರದಲ್ಲಿ | ತೂಬು | : | ಹಾಳಾಗಿದೆ |
| ಅಚ್ಚುಕಟ್ಟು ಪ್ರದೇಶ | : | 50 ಎಕರೆ | ಉಪಯೋಗ | : | ಕೃಷಿಗೆ |

ತಿಮ್ಮಣ್ಣ ನಾಯಕನ ಕೆರೆಯು ಶಿವಪ್ಪನಾಯಕನ ಕಾಲಾವಧಿಯಲ್ಲಿ ನಿರ್ಮಾಣವಾಗಿದೆ. ಈ ಕೆರೆಯು ಕೆಳದಿ ಅರಸರ ಕಾಲದ ದೊಡ್ಡ ಕೆರೆಗಳಲ್ಲಿ ಇದೂ ಒಂದಾಗಿದೆ. ಕೋಟೆಯ ಕೆಳಗಿರುವ ಶಿವಪ್ಪನಾಯಕನ

ಕೆರೆಯಿಂದ ಬರುವ ನೀರು ಮತ್ತು ಹತ್ತಿರದ ಗುಡ್ಡದಿಂದ ಬರುವ ನೀರು ಮತ್ತು ಮಳೆಯ ನೀರಿನಿಂದ ನೀರು ಸಂಗ್ರಹವಾಗುತ್ತದೆ. ಈ ಕೆರೆಯ ಏರಿಯ ಮೇಲೆ ಗಣಪತಿ ದೇವಾಲಯವಿದೆ. ಈ ಕೆರೆಯ ತೂಬು ಮತ್ತು ಏರಿ ಇರುವ ಕಡೆ ಗಿಡ ಮರಗಳು ಅತಿಯಾಗಿ ಬೆಳೆದಿದ್ದು ಹೋಗಲು ಕಷ್ಟಕರವಾಗಿದೆ. ಅಲ್ಲದೇ ಈ ಕೆರೆಗೆ ಇಳಿಯಲು ಮೆಟ್ಟಿಲುಗಳನ್ನು ನಿರ್ಮಿಸಲಾಗಿದೆ. ಈಗ ಈ ಕೆರೆಯನ್ನು ಒತ್ತುವರಿ ಮಾಡಲಾಗುತ್ತಿದೆ. ಈ ಕೆರೆಯ ನೀರನ್ನು ಕೃಷಿಗೆ ಉಪಯೋಗಿಸಲಾಗುತ್ತಿದೆ.

**7. ಅರಮನೆಯ ಕೆಳಭಾಗದಲ್ಲಿರುವ ಕೆರೆ**

| | | | | | |
|---|---|---|---|---|---|
| ಊರು | : | ಕವಲೇದುರ್ಗ | ಸ್ಥಿತಿ | : | ಶಿಥಿಲಾವಸ್ಥೆ |
| ದಿಕ್ಕು | : | ಅರಮನೆಯ ಪೂರ್ವ | ಸಂರಕ್ಷಣೆ | : | ಇಲ್ಲ |
| ಕಾಲ | : | 16–17ನೇ ಶತಮಾನ | ವಿಸ್ತೀರ್ಣ | : | 400 ಅಡಿ ಉದ್ದ 400 ಅಡಿ ಅಗಲ |
| ಸ್ಥಳ | : | ಅರಮನೆಯ ಅವಶೇಷದ ಕೆಳಗೆ | ಉಪಯೋಗ | : | ದಿನನಿತ್ಯದ ಬಳಕೆಗೆ |

ಅರಮನೆಯ ಅವಶೇಷವಿರುವ ಸ್ಥಳದಿಂದ ಕೆಳಗೆ ಈ ಕೆರೆ ಇದ್ದು ಇದರಲ್ಲಿ ಈಗ ಸಂಪೂರ್ಣ ನೀರು ಬತ್ತಿಹೋಗಿದೆ. ಈ ಕೆರೆಯ ಒಂದು ವಿಶೇಷತೆ ಏನೆಂದರೆ ಕೆಳದಿ ಅರಸರ ಏತ ನೀರಾವರಿ ವ್ಯವಸ್ಥೆಯ ಅವಶೇಷವು ನಮಗೆ ಇಲ್ಲಿ ಕಾಣಸಿಗುತ್ತದೆ ಮತ್ತು ಈಗಲೂ ಇದೆ. ಈ ಕೆರೆಯ ನೀರನ್ನು ಒಂದು ಅಡಿ ಅಗಲವಿರುವ ಮತ್ತು ಎಂಟು ಅಡಿ ಮುಂದೆ ಚಾಚಿರುವ ಕಲ್ಲಿನಿಂದ ನೀರನ್ನು ಏತ ನೀರಾವರಿಯ ಮೂಲಕ ತೆಗೆದು 3 ಅಡಿ ಅಗಲದ ಕಲ್ಲಿನ ಕೊಳವೆಯ ಮಾದರಿಯಲ್ಲಿರುವುದಕ್ಕೆ ನೀರನ್ನು ಎತ್ತು ಹಾಕಿ ಅದರ ಮೂಲಕ ನೀರನ್ನು ಹರಿಸಲಾಗುತ್ತಿತ್ತು. ಇದೊಂದು ಕೆಳದಿ ಅರಸರ ಮುಖ್ಯ ಏತ ನೀರಾವರಿ ಅವಶೇಷವಾಗಿದೆ. ಇಲ್ಲಿಂದ ನೀರನ್ನು ಇದರ ಮೂಲಕ ಮುಂದಿನ ಕೆರೆಗೆ ಹರಿಸಲಾಗಿದೆ. ಈ ಕೆರೆಗೆ ನೀರು ಕೋಟೆಯ ಮೇಲಿನಿಂದ ಬಂದು ಸಂಗ್ರಹವಾಗುತ್ತಿತ್ತು. ಕಲ್ಲಿನಿಂದ ಇದನ್ನು ನಿರ್ಮಿಸಲಾಗಿದೆ ಹಾಗೂ ಇದು ಚಚ್ಚೌಕಾಕಾರವಾಗಿದೆ.

**8. ಕಾಶಿ ವಿಶ್ವೇಶ್ವರ ದೇವಾಲಯದ ಎಡಕ್ಕೆ ಇರುವ ಕೆರೆ**

| | | | | | |
|---|---|---|---|---|---|
| ಊರು | : | ಕವಲೇದುರ್ಗ | ಸಂರಕ್ಷಣೆ | : | ಇಲ್ಲ |
| ದಿಕ್ಕು | : | ಕಾಶಿ ವಿಶ್ವೇಶ್ವರ ದೇವಾಲಯದ | ವಿಸ್ತೀರ್ಣ | : | 400 ಅಡಿ ಉದ್ದ 400 |

| | | | | | |
|---|---|---|---|---|---|
| | | ಪಶ್ಚಿಮ | | | ಅಡಿ ಅಗಲ |
| ಕಾಲ | : | 16–17ನೇ ಶತಮಾನ | ತೂಬು | : | ಇಲ್ಲ |
| ಸ್ಥಳ | : | ಕಾಶಿ ವಿಶ್ವೇಶ್ವರ ದೇವಾಲಯದ ಎಡಕ್ಕೆ | ಉಪಯೋಗ | : | ದಿನನಿತ್ಯದ ಬಳಕೆಗೆ |
| ಸ್ಥಿತಿ | : | ಶಿಥಿಲಾವಸ್ಥೆ | | | |

ಈ ಕೆರೆಯು ಕಾಶಿ ವಿಶ್ವೇಶ್ವರ ದೇವಾಲಯದಿಂದ 100 ಮೀಟರ್ ಅಂತರದಲ್ಲಿದೆ. ಇದಕ್ಕೆ ಇಳಿಯಲು ಮೆಟ್ಟಿಲುಗಳಿವೆ. ಸುತ್ತ ಚೌಕಾಕಾರದಲ್ಲಿ ಕಲ್ಲುಗಳಿಂದ ಕಟ್ಟಿದ ಗೋಡೆ ಇದೆ. ಇದಕ್ಕೂ ಸಹ ಏತ ನೀರಾವರಿಯ ಮೂಲಕ ನೀರನ್ನು ಮುಂದಿನ ಕೆರೆಗೆ ಹರಿಸಿರಬಹುದು. ಆದರೆ ಏತ ನೀರಾವರಿಯ ಅವಶೇಷ ಇಲ್ಲ ಇಲ್ಲ. ಇದಕ್ಕೆ ನೀರು ಅರಮನೆಯ ಕೆಳಗೆ ಇರುವ ಕೆರೆಯಿಂದ ಏತ ನೀರಾವರಿಯ ಮೂಲಕ ಸಂಗ್ರಹವಾಗುತ್ತಿತ್ತು.

**೯. ಕಾಶಿ ವಿಶ್ವೇಶ್ವರ ದೇವಾಲಯದ ಹಿಂಭಾಗದ ಕೆರೆ**

| | | | | | |
|---|---|---|---|---|---|
| ಊರು | : | ಕವಲೇದುರ್ಗ | ಸಂರಕ್ಷಣೆ | : | ಇಲ್ಲ |
| ದಿಕ್ಕು | : | ಅರಮನೆಯ ಪೂರ್ವ | ವಿಸ್ತೀರ್ಣ | : | 400 ಅಡಿ ಉದ್ದ 400 ಅಡಿ ಅಗಲ |
| ಕಾಲ | : | 16–17ನೇ ಶತಮಾನ | ತೂಬು | : | ಇಲ್ಲ |
| ಸ್ಥಳ | : | ಕಾಶಿ ವಿಶ್ವೇಶ್ವರ ದೇವಾಲಯದ ಹಿಂಭಾಗ | ಉಪಯೋಗ | : | ದಿನನಿತ್ಯದ ಬಳಕೆಗೆ |
| ಸ್ಥಿತಿ | : | ಶಿಥಿಲಾವಸ್ಥೆ | | | |

ಈ ಕೆರೆಯು ಕಾಶಿ ವಿಶ್ವೇಶ್ವರ ದೇವಾಲಯದ ಹಿಂಭಾಗದಲ್ಲಿ 100 ಮೀಟರ್ ಅಂತರದಲ್ಲಿದೆ. ಈ ಕೆರೆಗೆ ಇಳಿಯಲು ಯಾವುದೇ ಮೆಟ್ಟಿಲುಗಳಿಲ್ಲ. ಇದಕ್ಕೂ ಸಹ ಸುತ್ತಲೂ ಚೌಕಾಕಾರದಲ್ಲಿ ಕಲ್ಲುಗಳಿಂದ ಕಟ್ಟಿದ ಗೋಡೆ ಇದೆ. ಇದಕ್ಕೂ ಸಹ ಏತ ನೀರಾವರಿಯ ಮೂಲಕ ನೀರನ್ನು ಮುಂದೆ ಹರಿಸಲಾಗಿರಬಹುದು. ಇದಕ್ಕೆ ನೀರು ಕಾಶಿ ವಿಶ್ವೇಶ್ವರ ದೇವಾಲಯದ ಎಡಕ್ಕೆ ಇರುವ ಕೆರೆಯಿಂದ ಏತ ನೀರಾವರಿಯ ಮೂಲಕ ಹರಿದುಬರುತ್ತದೆ.

ಹೀಗೆ ಕವಲೇದುರ್ಗದಲ್ಲಿ ಕಂಡುಬರುವ ಕೆಲವು ಕೆರೆ ಮತ್ತು ಕೊಳಗಳು ಪ್ರಸ್ತುತವಾಗಿ ಅಳಿವಿನ ಅಂಚಿನಲ್ಲಿವೆ. ಮುಖ್ಯವಾಗಿ ಸರ್ಕಾರಗಳು ಹೊಸ ಹೊಸ ನೀರಾವರಿ ಯೋಜನೆಗಳನ್ನು ಕೈಬಿಟ್ಟು ಈ ಅಳಿವಿನ ಅಂಚಿನಲ್ಲಿರುವ ಪ್ರಾಚೀನ ಕೆರೆ ಮತ್ತು ಕೊಳಗಳ ಕಾಯಕಲ್ಪಕ್ಕೆ ಮುಂದಾಗಬೇಕಾದ ಅವಶ್ಯಕತೆಯಿದೆ. ಇರುವ ಕೆರೆಗಳ ಹೂಳು ತೆಗೆಸುವ, ತೂಬುಗಳ ದುರಸ್ತೀಕರಣ ಮತ್ತು ಏರಿಗಳ ದುರಸ್ತಿಯು ಅವಶ್ಯಕ. ಪಾತಾಳಕ್ಕೆ ಇಳಿಯುತ್ತಿರುವ ಅಂತರ್ಜಲಕ್ಕೆ ಕೈಹಾಕುವ ಬದಲು ಇವುಗಳ ಜೀರ್ಣೋದ್ಧಾರದ ಕೆಲಸ ಅತಿ ಸೂಕ್ತ ಮತ್ತು ಸುಲಭದ್ದಾಗಿರುತ್ತದೆ. ಕೆರೆ ಮತ್ತು ಕೊಳಗಳ ಅಭಿವೃದ್ಧಿ ಕೇವಲ ಸರ್ಕಾರದ ಕೆಲಸವಾಗಿರದೆ ಪ್ರತಿಯೊಬ್ಬ ನಾಗರೀಕನ ಕರ್ತವ್ಯವೆಂದು ತಿಳಿಯಬೇಕು.

## ಆಧಾರ ಗ್ರಂಥಗಳು

1.ಕೆಳದಿ ವೆಂಕಟೇಶ್ ಜೋಯಿಸ್. 1991. *ಕೆಳದಿ ಶಾಸನ ಸಂಪುಟ,* ತೋಂಟದಾರ್ಯ ಮಠ, ಗದಗ.

2.*ಕೆಳದಿ ಸಂಸ್ಥಾನ ಸಮಗ್ರ ಅಧ್ಯಯನ.* 1994. ಜಗದ್ಗುರು ಮುರುಘರಾಜೇಂದ್ರ ಮಠ, ಆನಂದಪುರಂ.

3.ಕೆಳದಿ ವೆಂಕಟೇಶ್ ಜೋಯಿಸ್. 2009. *ಮರೆಯಲಾಗದ ಕೆಳದಿ ಸಾಮ್ರಾಜ್ಯ,* ಸರಸ್ವತಿ ಸೇವಾ ಸಮಿತಿ, ಕೆಳದಿ.

4.ಗುಂಡಾ ಜೋಯಿಸ್ ಕೆಳದಿ ಮತ್ತು ಕಲ್ಲಾಪುರ ಜಿ.ವಿ. 2004. *ಕೆಳದಿ ಕಾಲದ ಐತಿಹಾಸಿಕ ದಾಖಲೆಗಳು,* ಮುದ್ರಾ ಆಫ್‌ಸೆಟ್ ಪ್ರಕಾಶಕರು, ಸಾಗರ.

5.ಶಾಮಾಶಾಸ್ತ್ರಿ, ಆರ್. 1921. *ಕೆಳದಿ ನೃಪವಿಜಯ,* ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

6.ಸ್ವಾಮಿನಾಥನ್, ಕೆ.ಡಿ. 1957. ನಾಯಕಾಸ್ ಆಫ್ ಇಕ್ಕೇರಿ, ಮದರಾಸ್.

7.Dixit, G.S., Kuppaswamy, R.S. and K.S. Mohan. 2000. *Tank Irrigaiton in Karnataka : A Historical Survey*, Prasaranga, Kannada Univeristy, Hampi.